# ಬೆಳಕಿನ ನೆರಳು

**ಮಹಾತ್ಮ ಮತ್ತು ಹರಿಲಾಲ್**

■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ



## ಮಿಯಾಂ ಖಾನ್ ಮನೆಯಲ್ಲಿ ಹರಿಲಾಲ

‘ಬಾಪೂಜಿ, ನಿಮಗೆ ನೆನಪಿದೆಯೇ?’ ಹರಿಲಾಲ ಹೇಳಿಯೇ ಬಿಟ್ಟ, ‘ಫೀನಿಕ್ಸ್ ಆಶ್ರಮದಲ್ಲಿ ಒಂದು ಚಿಟಿಕೆ ಸಕ್ಕರೆಯನ್ನು ದೇವದಾಸನಿಗೆ ಹೆಚ್ಚು ಹಾಕಿದ್ದಕ್ಕೆ, ಆಶ್ರಮವಾಸಿಗಳು ನಿಮಗೆ ಬಾ ವಿರುದ್ಧವಾಗಿ ದೂರಿದ್ದರು. ಇಷ್ಟು ಸಣ್ಣ ಅಪರಾಧಕ್ಕೆ ನೀವು ಬಾ ಅವರ ಮರ್ಯಾದೆಯನ್ನು ಎಲ್ಲರೆದುರು ಕಳೆದಿದ್ದೀರಿ. ಅಂದು ನಾನು ಬಾ ಅವರ ಕಣ್ಣುಗಳಲ್ಲಿ ಕಣ್ಣೀರನ್ನು ನೋಡಿದ್ದೆ. ಚಿಟಿಕೆ ಸಕ್ಕರೆಗಾಗಿ ಬಾ ಅವರನ್ನು ಅಪರಾಧಿ ಎಂದು ತೀರ್ಮಾನಿಸಿದ ಅದೇ ಆಶ್ರಮವಾಸಿಗಳು ಒಬ್ಬರ ನಂತರ ಒಬ್ಬರಂತೆ ಹೋರಾಟದಲ್ಲಿ ಭಾಗವಹಿಸುವುದನ್ನು ಬಿಟ್ಟು ಇಂದು ಹಣ ಸಂಪಾದನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ, ಈ ವಿಷಯ ನಿಮಗೆ ತಿಳಿದೇ ಇದೆ...ಪಾಪ, ಬಾ ಅವರು ಅಂದು ಬಿಕ್ಕಳಿಸಿಬಿಕ್ಕಳಿಸಿ ಅತ್ತಿದ್ದರು.’

ಬಾಪೂ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು. ಅವರ ಮುಖದಲ್ಲಿ ವರ್ಣಿಸಲಾರದಂಥ ವ್ಯಥೆ ಮೂಡಿತು. ಅವರು ಯಾವುದನ್ನು ಪ್ರಾಮಾಣಿಕತೆ ಮತ್ತು ನಿಷ್ಠೆ ಎಂದು ತಿಳಿದರೋ, ಅದನ್ನೇ ನಿತ್ಯ ಜೀವನದಲ್ಲಿ ಪಾಲಿಸಿದ್ದರು. ಒಂದು ವೇಳೆ ಬೇರೆಯವರು ಅದನ್ನು ನಿಷ್ಠೆ ಮತ್ತು ಪ್ರಾಮಾಣಿಕತೆ ಎಂದು ತಿಳಿಯದಿದ್ದರೆ, ಅದಕ್ಕೆ ತಾವೇನು ತಾನೇ ಮಾಡಲು ಸಾಧ್ಯವಿದೆ?

‘ಹರಿ,’ ಸ್ವಲ್ಪ ತಡೆದು ಬಾಪೂ ಹೇಳಿದರು, ‘ನೀನು ಸಾಕಷ್ಟು ದಿನಗಳಿಂದ ಇದನ್ನೆಲ್ಲಾ ಮೌನವಾಗಿ ಸಹಿಸುತ್ತಾ ಬಂದಿರುವಂತೆ ತೋರುತ್ತದೆ, ಆ ದುಃಖ ಇಂದು ನಿನ್ನನ್ನು ಒಳಗೊಳಗೇ ತಿನ್ನುತ್ತಿದೆ. ದುಃಖದ ಮೂಲವನ್ನೇ ಮೊದಲು ನೀನು ನಾಶಪಡಿಸಿದ್ದರೆ, ಇವತ್ತು ನೀನು ಅನುಭವಿಸುತ್ತಿರುವ ಸಂಕಟದಿಂದ ಮುಕ್ತನಾಗುತ್ತಿದ್ದೆ. ಹೋಗಲಿ ಬಿಡು, ದೇವರ ಲೀಲೆ ವಿಚಿತ್ರವಾಗಿರುತ್ತದೆ.’

ಮತ್ತೊಮ್ಮೆ ವ್ಯಾಕುಲಗೊಳಿಸುವಂಥ ಮೌನ ಅಲ್ಲಿ ಕವಿಯಿತು. ನಡು ರಾತ್ರಿಯ ನಕ್ಷತ್ರಗಳು ಆಗಸದಲ್ಲಿ ತೀವ್ರ ಗತಿಯಲ್ಲಿ ಓಡುತ್ತಾ ಹೋಗುತ್ತಿದ್ದವು. ಜೋಹಾನ್ಸ್‌ಬರ್ಗ್ ಗಾಢ ನಿದ್ರೆಯಲ್ಲಿತ್ತು.

‘ಬಾಪೂಜಿ, ಇವತ್ತು ನಾನು ಇನ್ನೊಂದು ವಿಷಯವನ್ನು ಹೇಳಲು ಅವಕಾಶವನ್ನು ಕೊಡಿ,’ ಹರಿಲಾಲ ಮೌನವನ್ನು ಮುರಿದ,

‘ನಾನಿಲ್ಲಿದ್ದರೆ ಸ್ವತಂತ್ರವಾಗಿ ಏನೂ ನಿರ್ಣಯವನ್ನು ತೆಗೆದುಕೊಳ್ಳಲಾರೆ ಎಂದು ನನಗೆ ಅನ್ನಿಸುತ್ತಿದೆ. ಮನುಷ್ಯ ತನ್ನ ಕಾಲ ಮೇಲೆ ತಾನು ನಿಂತು, ತನ್ನ ಏಳಿಗೆಯನ್ನು ಸಾಧಿಸಬೇಕೆಂದು ನೀವು ನಮಗೆ ಅನೇಕ ಬಾರಿ ಕಲಿಸಿದ್ದೀರ. ದೇವರ ಮೇಲೆ ಶ್ರದ್ಧೆಯಿಟ್ಟು ಬುದ್ಧಿ ಸೂಚಿಸಿದಂಥ ಕೆಲಸವನ್ನು ಮಾಡಬೇಕೆಂದೂ ಸಹ ನೀವೇ ಕಲಿಸಿದ್ದೀರ. ಈಗ ನಾನು ನಿಮ್ಮ ಆ ಉಪದೇಶಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ನನಗೆ ಅನ್ನಿಸುತ್ತದೆ...ಬಾಪೂಜಿ, ನನಗೆ ಆಶೀರ್ವದಿಸಿ.’

‘ಹರಿ, ನನ್ನ ಆಶೀರ್ವಾದ ಸದಾ ನಿನಗಿದ್ದೇ ಇದೆ. ನೀನು ನಿನ್ನ ನೈತಿಕತೆಯನ್ನು ಎಲ್ಲಿಯವರೆಗೆ ಸುರಕ್ಷಿತವಾಗಿಟ್ಟು ಕೊಳ್ಳುತ್ತೀಯೋ, ಅಲ್ಲಿಯವರೆಗೆ ನನ್ನ ಆಶೀರ್ವಾದ ನಿನ್ನ ಮೇಲಿರುತ್ತದೆ. ಶ್ರದ್ಧೆ, ಶುದ್ಧ ನಿಷ್ಠೆ ಮತ್ತು ಒಳ್ಳೆಯ ನಡೆತೆಗಿಂತ ದೊಡ್ಡ ಸಂಪತ್ತು ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ.’

ಸಾಕಷ್ಟು ಹೊತ್ತು ತಂದೆಮಗ ಮೌನವಾಗಿ ಕೂತಿದ್ದರು. ಇನ್ನು ಮುಂದೆ ಮಾತನಾಡುವ ಅಗತ್ಯವಿಲ್ಲವೆಂದು ಇಬ್ಬರಿಗೂ ಮನದಟ್ಟಾಗಿತ್ತು. ಇಬ್ಬರ ಮನಸ್ಸೂ ಶೂನ್ಯವಾಗಿತ್ತು. ಅಲ್ಲದೆ, ಈ ಶೂನ್ಯತೆಯಿಂದಾಗಿ ಹಗುರ ಸಹ ಆಗಿದ್ದರು. ರಾತ್ರಿ ಸಂಪೂರ್ಣವಾಗಿ ಕಳೆದಿತ್ತು; ಬೆಳಗಾಗುವುದರಲ್ಲಿ ವಿಳಂಬವಿರಲಿಲ್ಲ.